

ಅ.ನ.ಕೃ.

# ಗಾಂಧಿ, ಬೆಳಗಾಂವಿ ಮತ್ತು ಮುದವೀಡರ ಕನ್ನಡ!

**ಅ.ನ. ಕೃಷ್ಣರಾವ್ ಅವರ 'ಬರಹಗಾರನ ಬದುಕು' ಕೃತಿಯ ಒಂದು ಭಾಗ**

ನನ್ನ ಜೀವನ ನಾಟಕಾಭಿರುಚಿಗಳ ಮೇಲೆ ಅಮೆಚೂರ್ ಮಂಡಳಿ ಸಾಕಷ್ಟು ಪ್ರಭಾವ ಬೀರಿತು. ದತ್ತೂ ಮಾಮ, ಕೈ (ಕೈಲಾಸಂ), ಪಾಚುವಿನಂತಹ (ಎಂ. ಎನ್. ಪಾರ್ಥಸಾರಥಿಯವರು) ಸನ್ಮಿತ್ರರು ನನಗೆ ದೊರೆತುದು ಅಲ್ಲೇ. ಹಲವು ಪ್ರತಿಭಾಶಾಲಿ ನಾಟಕಕಾರರು, ನಟರು, ಅಮೆಚೂರ್ ಮಂಡಲಿಯ ಪ್ರೋತ್ಸಾಹದಿಂದ ಬೆಳಕಿಗೆ ಬಂದರು.

ಅಮೆಚೂರ್ ಮಂಡಲಿ ಮಾಡಿದ ಮತ್ತೊಂದು ಮಹತ್ವವೆಂದರೆ 9 ಜುಲೈ 1926ರಲ್ಲಿ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಆಡಿದ 'ದೀನಬಂಧು ಕಬೀರ್' ಹಿಂದೀ ನಾಟಕ. ನಾಟಕವನ್ನು ಬರೆದು, ನಟ ನಟಿಯರಿಗೆ ಅದನ್ನು ಅಭ್ಯಾಸ ಮಾಡಿಸಿ, ಅದರ ಮುಖ್ಯ ಪಾತ್ರ (ಕಬೀರ್) ವಹಿಸಿದ್ದವರು ಪಂಡಿತ ತಾರಾನಾಥರವರು, ಅಂದಿನ ನಾಟಕದ ಪೂರ್ಣ ಉತ್ಪನ್ನವನ್ನು ಗಾಂಧೀಜಿಯವರಿಗೆ ಅತ್ಯಂತ ಪ್ರಿಯವಾಗಿದ್ದ ಖಾದಿ ನಿಧಿಗೆ ಅರ್ಪಿಸಲಾಯಿತು.

ನಾಟಕ, ಸಿನಿಮಾಗಳಿಗೆ ಕಾಲಿಡದ ಋಜು ಸನ್ಯಾಸಿ ಗಾಂಧೀಜಿ ನಾಟಕವನ್ನು ಪೂರ್ತಿಯಾಗಿ ನೋಡಿದರಲ್ಲದೆ, ಒಂದು ಸಣ್ಣ ಭಾಷಣ ಮಾಡಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. 'ಈ ದಿನವು ನನ್ನ ಆಯುಷ್ಯದಲ್ಲಿ ಶುಭದಿನವಾಗಿದೆ. ಈ ದಿನದ ಸಂತೋಷವನ್ನು ನಾನು ಎಂದೆಂದಿಗೂ ಮರೆಯಲಾರೆ. ನಾನು ಸಜೀವದಿಂದ ಕರ್ನಾಟಕವನ್ನು ಬಿಟ್ಟು ಹೋದರೆ ಈ ದಿನದ ಸುಖವನ್ನು ಜ್ಞಾಪಿಸಿಕೊಳ್ಳುತ್ತಿರುವೆನು. ದರಿದ್ರ ನಾರಾಯಣರ ಪ್ರತಿನಿಧಿಯಾದ ನನಗೆ ಅರ್ಪಿಸಿರುವ ಧನಕ್ಕೆ ಬೆಲೆಯನ್ನು ಕಟ್ಟುವ ಹಾಗಿಲ್ಲ. ಏಕೆಂದರೆ, ಅದು ಅಮೌಲ್ಯವಾಗಿದೆ. ಈ ದಿನ ನನಗೆ ಮೂರು ಬಗೆಯಿಂದ ನೀವು ಸಂತೋಷವನ್ನುಂಟು